**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**
**<u>ಸಿ.ಸಿ.1621/2023</u>**

| | | |
|---|---|---|
| ಸಾಕ್ಷಿದಾರರ ಹೆಸರು | : ಸುನಿಲ್ | ಡಿಡಬ್ಲ್ಯೂ1 |
| ತಂದೆಯ ಹೆಸರು | : ದೇವೇಗೌಡ | |
| ವಯಸ್ಸು | : 48 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವ್ಯವಸಾಯ ಮತ್ತು ಅಡಿಕೆ ವ್ಯಾಪಾರ | ದಿನಾಂಕಃ 21.11.2025 |
| ವಾಸಸ್ಥಳ | : ಜೇನುಬೈಲು, ಮೂಡಿಗೆರೆ. | |

**<u>:ಮುಖ್ಯ ವಿಚಾರಣೆಃ ಶ್ರೀ ಎಂ.ಎಂ.ಆರ್. ವಕೀಲರಿಂದ:</u>**

ಪಿರ್ಯಾದಿಯ ಪರಿಚಯ ನನಗಿಲ್ಲ.

4 ವರ್ಷದ ಹಿಂದೆ ನಾನು ಉದುಸೆ ಚಂದ್ರೇಗೌಡ ರವರಿಂದ ಅಡಿಕೆ ಚೇಣಿ ಪಡೆದುಕೊಂಡು ಆ ವ್ಯವಹಾರದ ಭದ್ರತೆಗಾಗಿ ಜೋಗಣ್ಣನಕೆರೆ ಶಾಖೆಯ ಕೆನರಾ ಬ್ಯಾಂಕಿಗೆ ಸಂಬಂಧಪಟ್ಟ ನನ್ನ ಒಂದು ಖಾಲಿ ಚೆಕ್ ನ್ನು ಸಹಿ ಮಾಡಿ ಕೊಟ್ಟಿದ್ದೆ. ಆನಂತರ ಅಡಿಕೆ ಬೆಲೆಯಲ್ಲಿ ನನ್ನ ಹಾಗೂ ಚಂದ್ರೇಗೌಡರವರ ನಡುವೆ ಮನಸ್ತಾಪ ಆಗಿ ಸ್ವಲ್ಪ ಹಣ ಹೆಚ್ಚಾಗಿ ಕೊಡಿ ಎಂದು ಕೇಳಿದ್ದರು. ಚಂದ್ರೇಗೌಡ ರವರೊಂದಿಗೆ ಮಾತುಕತೆಯಾದಂತೆ ನಾನು ಅವರಿಗೆ ಸಂಪೂರ್ಣ ಹಣವನ್ನು ಕೊಟ್ಟಿದ್ದೇನೆ. ನಾನು ಚಂದ್ರೇಗೌಡ ರವರಿಗೆ ಹೆಚ್ಚು ಹಣ ಕೊಡದೇ ಇರುವ ಕಾರಣ ಅವರು ನನ್ನ ಚೆಕ್ ನ್ನು ವಾಪಸ್ಸು ಕೊಡದೇ ಪಿರ್ಯಾದಿಯ ಮೂಲಕ ನನ್ನ ಚೆಕ್ ನ್ನು ಬ್ಯಾಂಕಿಗೆ ಸಲ್ಲಿಸಿ ಈ ಪ್ರಕರಣ ದಾಖಲಿಸಿದ್ದಾರೆ. ನಾನು ಪಿರ್ಯಾದಿಗೆ ಯಾವುದೇ ಹಣ ಕೊಡಬೇಕಾಗಿಲ್ಲ. ಆದ್ದರಿಂದ ಪಿರ್ಯಾದನ್ನು ವಜಾ ಮಾಡಬೇಕಾಗಿ ಕೋರುತ್ತೇನೆ.

ಸಾಕ್ಷಿಯು ನಿಪಿ-1 ನ್ನು ನೋಡಿ ಅದೇ ಚೆಕ್ ನ್ನು ಮೇಲೆ ಹೇಳಿದಂತೆ ಚಂದ್ರೇಗೌಡ ರವರಿಗೆ ಕೊಟ್ಟಿದ್ದು ಎಂದು ಗುರುತಿಸುತ್ತಾರೆ. ನಿಪಿ-1(ಎ) ಸಹಿ ನನ್ನದೇ ಆದರೆ ಉಳಿದ ಬರವಣಿಗೆಯನ್ನು ನಾನು ಬರೆದಿರಲಿಲ್ಲ.

**<u>ಪಾಟೀ ಸವಾಲುಃ ಪಿರ್ಯಾದಿ ಪರ ಶ್ರೀ ಬಿ.ಟಿ.ಎನ್. ವಕೀಲರಿಂದಃ</u>**

ನಾನು ಚಂದ್ರೇಗೌಡರವರಿಂದ ಕರಾರು ಬರೆಸಿಕೊಂಡಿಲ್ಲ. ಅಡಿಕೆ ವ್ಯವಹಾರದ ಬಾಬ್ತು ನಾನು ಚಂದ್ರೇಗೌಡರವರಿಗೆ ನಗದಾಗಿಯೇ ಹಣ ಕೊಟ್ಟಿರುವ ಕಾರಣ ಆ ಬಗ್ಗೆ ಯಾವುದೇ ದಾಖಲೆ ಇಲ್ಲ. ನಾನು ಚಂದ್ರೇಗೌಡರವರ ಬಳಿ ನನ್ನ ಚೆಕ್ ನ್ನು ವಾಪಸ್ಸು ಕೊಡುವಂತೆ ಮೌಖಿಕವಾಗಿ ಕೇಳಿದ್ದೆ, ಆದರೆ ಅವರ ವಿರುದ್ಧ ಯಾವುದೇ ಕಾನೂನು ಕ್ರಮ ತೆಗೆದುಕೊಂಡಿಲ್ಲ. ಚಂದ್ರೇಗೌಡರವರ ಮೇಲೆ ನನಗೆ ವಿಶ್ವಾಸ ಇದ್ದ ಕಾರಣ ಅವರ ಬಳಿ ಇದ್ದ ನನ್ನ ಚೆಕ್ ನ್ನು ಮಾನ್ಯ ಮಾಡದಂತೆ ಬ್ಯಾಂಕಿನವರಿಗೆ ಮನವಿ ಸಲ್ಲಿಸಿಕೊಂಡಿರಲಿಲ್ಲ. 4 ವರ್ಷದ ಹಿಂದೆ ಡಿಸೆಂಬರ್ ಮತ್ತು ಜನವರಿ ತಿಂಗಳಲ್ಲಿ ನಾನು ಚಂದ್ರೇಗೌಡರವರೊಂದಿಗೆ ವ್ಯವಹಾರ ಮಾಡಿದ್ದು ದಿನಾಂಕ ನನಗೆ ಗೊತ್ತಿಲ್ಲ. ನಾನು ಇಲ್ಲಿಯವರೆಗೂ ಚಂದ್ರೇಗೌಡರವರ ವಿರುದ್ಧ ಯಾವುದೇ ಕಾನೂನು ಕ್ರಮ ತೆಗೆದುಕೊಂಡಿಲ್ಲ ಆದರೆ ಪಿರ್ಯಾದಿ ಈ ಪ್ರಕರಣ ದಾಖಲಿಸಿರುವ ಕಾರಣ ಪಿರ್ಯಾದಿಯನ್ನೇ ಕೇಳಬೇಕೆಂದು ಸುಮ್ಮನಿದ್ದೆ ಎಂದು ನುಡಿಯುತ್ತಾರೆ.

ಪಿರ್ಯಾದಿ ತನ್ನ ವಕೀಲರ ಮೂಲಕ ನನಗೆ ಕಳುಹಿಸಿದ್ದ ನೋಟೀಸನ್ನು ನಾನು ತಿರಸ್ಕರಿಸಿ ವಾಪಸ್ಸು ಕಳುಹಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-3 ರಲ್ಲಿ ನಮೂದಿಸಿರುವ ನನ್ನ ವಿಳಾಸ ಸರಿ ಇದೆ. ನಾನು ಪಿರ್ಯಾದಿಯಿಂದ ರೂ.9,00,000/- ಹಣವನ್ನು ಸಾಲವಾಗಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಆ ಹಣದ ಮರುಪಾವತಿಗಾಗಿ ನಾನು ನಿಪಿ-1 ರ ಚೆಕ್ ನ್ನು ಪಿರ್ಯಾದಿಗೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನಾನು ಪಿರ್ಯಾದಿಯಿಂದ ಪಡೆದುಕೊಂಡಿರುವ ರೂ.9,00,000/- ಹಣವನ್ನು ವಾಪಸ್ಸು ಕೊಡಲು ಭಾಧ್ಯಸ್ತ ಎಂದರೆ ಸರಿಯಲ್ಲ. ಪಿರ್ಯಾದಿಗೆ ಹಣ ವಾಪಸ್ಸು ಕೊಡಬೇಕಾಗುತ್ತದೆ ಎನ್ನುವ ಕಾರಣಕ್ಕೆ ನಿಪಿ-1 ರ ಚೆಕ್ ನ್ನು ಉದುಸೆ ಚಂದ್ರೇಗೌಡ ರವರಿಗೆ ಕೊಟ್ಟಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.